# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ

ಮಾನ್ಯ ಶ್ರೀ **ಗುಡದಯ್ಯ ರಾಮಪ್ಪ ಕೊಪ್ಪದ,** ಅಧ್ಯಕ್ಷರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: **13-05-2020 ರಂದು ಬುಧವಾರ 11-30 ಗಂಟೆಗೆ** ಜರುಗಿದ ಸಮಿತಿಯ ಸಾಮಾನ್ಯ ಸಭೆಯ ನಡುವಳಿಕೆಗಳು.

## ಸಭೆಗೆ ಹಾಜರಿದ್ದ ಸದಸ್ಯರು

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಗುಡದಯ್ಯ ರಾಮಪ್ಪ ಕೊಪ್ಪದ | ಅಧ್ಯಕ್ಷರು |
| 2 | ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ | ಉಪಾಧ್ಯಕ್ಷರು |
| 3 | ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ | ಸದಸ್ಯರು |
| 4 | ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ | ,, |
| 5 | ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ | ,, |
| 6 | ಶ್ರೀಮತಿ ಪಕ್ಕವ್ವ ಯಲ್ಲಪ್ಪ ಜೋಗಿ | ,, |
| 7 | ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ | ,, |
| 8 | ಶ್ರೀ ಸುರೇಶ ವೀರಭದ್ರಪ್ಪ ಬಳ್ಳಾರಿ | ,, |
| 9 | ಶ್ರೀ ನೀಲಪ್ಪ ಈರಪ್ಪ ಹತ್ತಿ | ,, |
| 10 | ಶ್ರೀ ರಾಜಶೇಖರಪ್ಪ ಮಹಾಲಿಂಗಪ್ಪ ಕರೆಣ್ಣವರ | ,, |
| 11 | ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ | ,, |
| 12 | ಶ್ರೀ ಪುಲಕೇಶಿ ಗೂಳಪ್ಪ ಉಪನಾಳ | ,, |

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಕಾರ್ಯದರ್ಶಿಗಳು, ಕೃಉಮಾಸ, ಲಕ್ಷ್ಮೇಶ್ವರ | ಕಾರ್ಯದರ್ಶಿಯವರು |

## ಸಭೆಗೆ ಗೈರ ಹಾಜರಿದ್ದ ಅಧಿಕಾರಿಗಳು

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಮಾನ್ಯ ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಗದಗ. | ಇಲಾಖಾ ಪ್ರತಿನಿಧಿ |
| 2 | ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮಾ.ಅ.ಯೋ. ಗದಗ | ಅಭಿಯಂತರರು |

| | |
|---|---|
| ವಿಷಯ ನಂ-1) | ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವ ಕುರಿತು ವಿಚಾರ. |
| ಠರಾವ ನಂ-1) | ದಿನಾಂಕ:20-02-2020 ರಂದು ಜರುಗಿದ ಸಾಮಾನ್ಯ ಸಭೆಯ ನಡುವಳಿಕೆಗಳನ್ನು ಓದಲಾಯಿತು. ಅವೆಲ್ಲವು ಸರಿ ಇದ್ದುದರಿಂದ ಒಪ್ಪಿ ದೃಢೀಕರಿಸಲಾಯಿತು.<br><br>ಸೂಚಕರು: ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ<br>ಅನುಮೋದಕರು: ಶ್ರೀ ನೀಲಪ್ಪ ಈರಪ್ಪ ಹತ್ತಿ |

**ವಿಷಯ ನಂ–2)** 2019–20 ನೇ ಸಾಲಿನ **ಫೆಬ್ರುವರಿ** ತಿಂಗಳ ಸಮಿತಿಯ ಆದಾಯ–ವೆಚ್ಚದ ಪತ್ರಿಕೆ ಪರಿಶೀಲಿಸಿ ಮಂಜೂರಾತಿ ನೀಡುವ ಕುರಿತು.

**ಠರಾವ ನಂ–2)** 2019–20 ನೇ ಸಾಲಿನ **ಫೆಬ್ರುವರಿ** ತಿಂಗಳ ಈ ಕೆಳಗಿನಂತಿರುವ ಆದಾಯ ಮತ್ತು ವೆಚ್ಚದ ತಃಖ್ತೆಯನ್ನು ಪರಿಶೀಲಿಸಿ ಒಪ್ಪಲಾಯಿತು.

**2020 ನೇ ಸಾಲಿನ ಫೆಬ್ರುವರಿ** ತಿಂಗಳಿನ ಆದಾಯ ವೆಚ್ಚದ ವಿವರಣಾತ್ಮಕ ತ:ಖ್ತೆ

| ಕ್ರ. ಸಂ | ಆದಾಯ | ಮೊತ್ತ | ಕ್ರ. ಸಂ | ವೆಚ್ಚ | ಮೊತ್ತ |
|---|---|---|---|---|---|
| 1 | ಅ) ಮಾರುಕಟ್ಟೆ ಶುಲ್ಕ 1.50%<br>ಬ) ಜಾನುವಾರು ಮಾ.ಶುಲ್ಕ | 2521859–00<br>1248–00 | 1 | ರಾಜ್ಯ ಸಂಚಿತ ನಿಧಿ ವಂತಿಕೆ<br>(ನವ್ಹಂಬರ್19 ರಿಂದ ಜನೇವರಿ2020 ತಿಂಗಳ) | 513180–00 |
| | **ಒಟ್ಟು ರೂ.** | **2523107–00** | 2 | ಕೃಷಿ ಮಾರಾಟ ಮಂಡಳಿ ವಂತಿಕೆ<br>(ನವ್ಹಂಬರ್19 ರಿಂದ ಜನೇವರಿ2020 ತಿಂಗಳ) | 171060–00 |
| 2 | ಶುದ್ಧ ನೀರಿನ ಘಟಕ | 9340–00 | 3 | ಕೃಷಿ ವಿಶ್ವ ವಿದ್ಯಾಲಯ ವಂತಿಕೆ<br>(ನವ್ಹಂಬರ್19 ರಿಂದ ಜನೇವರಿ2020 ತಿಂಗಳ) | 34212–00 |
| 3 | ಲೀವ್ & ಲೈಸನ್ಸ್ ಫೀ | 93129–00 | 4 | ಆವರ್ತ ನಿಧಿ ವಂತಿಕೆ<br>(ನವ್ಹಂಬರ್19 ರಿಂದ ಜನೇವರಿ2020 ತಿಂಗಳ) | 1366359–00 |
| 4 | ಲೈಸನ್ಸ್ ಫೀ | 21845–00 | 5 | ಭದ್ರತಾ ಸಿಬ್ಬಂದಿ ವೆಚ್ಚ<br>(2020 ಜನೇವರಿ ತಿಂಗಳ) | 205154–00 |
| 5 | ಫಾರ್ಮ ಫೀ | 1905–00 | 6 | ಅಧ್ಯಕ್ಷರ/ಉಪಾಧ್ಯಕ್ಷರ ಗೌರವ ಧನ | 4500–00 |
| 6 | ದಂಡ | 16964–00 | 7 | ಸದಸ್ಯರ ಸಭಾಭತ್ಯ ಪ್ರವಾಸ ಭತ್ಯ&ಸಿಟಿಂಗ್ ಫೀ | 7218–00 |
| 7 | ಇತರೆ | 1541–00 | 8 | ಪ್ರಚಾರ ಪ್ರಕಟಣೆ & ಜಾಹಿರಾತು | 24416–00 |
| | | | 9 | ಸಭೆಯ ವೆಚ್ಚ | 6000–00 |
| | | | 10 | ಸಾದಿಲ್ವಾರ ವೆಚ್ಚ | 565–08 |
| | | | 11 | ದೂರವಾಣಿ ವೆಚ್ಚ | 3820–00 |
| | | | 12 | ವಿದ್ಯುತ್ ವೆಚ್ಚ | 28093–00 |
| | | | 13 | ಜೀಪ ಇಂಧನ ಮತ್ತು ದುರಸ್ತಿ | 95491–00 |
| | | | 14 | ಅಭಿವೃದ್ಧಿ ಕಾಮಗಾರಿ ವೆಚ್ಚ (ನಿಯಮ 71 ರಡಿ) | 299387–00 |
| | **ಒಟ್ಟು ರೂ.** | **2667831–00** | | **ಒಟ್ಟು ರೂ.** | **2759455–08** |
| | **ಕೊರತೆ** | **91624–08** | | **ಉಳಿತಾಯ** | **--** |
| | **ಅಂತೂ** | **2759455–08** | | **ಅಂತೂ** | **2759455–08** |

ಸೂಚಕರು: ಶ್ರೀ ಶಿವಾನಂದ ಸಂಗಪ್ಪ ನೆಲವಿಗಿ
ಅನುಮೋದಕರು: ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ

**ವಿಷಯ ನಂ–3** ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ ವ್ಯಾಪ್ತಿಯಲ್ಲಿ ಬರುವ ಶಿರಹಟ್ಟಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 09 ದಿನಸಿ ಮಳಿಗೆಗಳು ನಿರ್ಮಿಸುವ ಕಾಮಗಾರಿಗೆ ಬಂದ ಟೆಂಡರ್‌ಗಳನ್ನು ಪರಿಶೀಲಿಸಿ ಒಪ್ಪುವ ಕುರಿತು.

**ಠರಾವ ನಂ–3** ಸಮಿತಿಯ 2017–18 ನೇ ಸಾಲಿನ ವಾರ್ಷಿಕ ಕ್ರೀಯಾ ಯೋಜನೆಯಡಿಯಲ್ಲಿ ಮಂಜೂರಾದ ಲಕ್ಷ್ಮೇಶ್ವರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ, ಶಿರಹಟ್ಟಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 09 ದಿನಸಿ ಮಳಿಗೆ ನಿರ್ಮಿಸುವ ಕಾಮಗಾರಿಯನ್ನು ನಿರ್ವಹಿಸಲು ಸಮಿತಿಯ ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ ಸಂಖ್ಯೆ/ಕೃಉಮಾಸ(ಲ)/ಅಭಿಕೆ/1064/2019–20, ದಿನಾಂಕ:30–01–2020 ರಂದು ಇ–ಪ್ರೊಕ್ಯೂರ್–ಮೆಂಟ್ ಮೂಲಕ ಟೆಂಡರ್‌ನ್ನು ಅಹ್ವಾನಿಸಲಾಗಿತ್ತು. ಟೆಂಡರ್ ಸ್ವೀಕರಿಸುವ ಕೊನೆಯ ದಿ:12–03–2020 ರಂದು ನಿಗಧಿಪಡಿಸಲಾಗಿತ್ತು. ದಿನಾಂಕ: 17–03–2020 ರಂದು ಬಿಡ್ ಟೆಂಡರ್‌ಗಳನ್ನು ತೆರೆದು ಟೆಂಡರ್‌ನಲ್ಲಿ ಭಾಗವಹಿಸಿದ 05 ಜನ ಗುತ್ತಿಗೆದಾರರು ಸಲ್ಲಿಸಿದ ದಾಖಲೆಗಳನ್ನು ತಾಂತ್ರಿಕ ಹಾಗೂ ಆರ್ಥಿಕ ಪರಿಶೀಲನೆಗಾಗಿ ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು. ಮಾ.ಅ.ಯೋ., ಗದಗ, ಇವರಿಗೆ ಸಲ್ಲಿಸಿ ತುಲನಾತ್ಮಕ ತಃಖ್ತೆ ತಯಾರಿಸಿಕೊಡಲು ಕೋರಲಾಗಿತ್ತು.

ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾ,ಅ,ಯೋ, ಗದಗ, ಇವರು ತುಲನಾತ್ಮಕ ಪಟ್ಟಿ ತಯಾರಿಸಿ ಕೊಟ್ಟಿದ್ದು, ಸದರಿಯವರ ತಾಂತ್ರಿಕ ವರದಿಯಲ್ಲಿ 02 ಜನ ಗುತ್ತಿಗೆದಾರರಾದ ಶ್ರೀ ರಮೇಶ ದಿವಟೆ ಹಾಗೂ ಶ್ರೀ ಎಫ್.ಟಿ. ಕವಲೂರ ಇವರು ಎಲ್.ಓ.ಸಿ ಪ್ರಮಾಣ ಪತ್ರ ಸಲ್ಲಿಸಿಲ್ಲವೆಂದು ಸೂಚಿಸುತ್ತಾ ಈ ಕೆಳಗಿನಂತೆ ತುಲನಾತ್ಮಕ ಪಟ್ಟಿ ತಯಾರಿಸಿ ಸಲ್ಲಿಸಿರುತ್ತಾರೆ.

| ಕ್ರ ಸಂ | ಗುತ್ತಿಗೆದಾರರ ಹೆಸರು | ಸೂಚಿಸಿದ ದರ | ಕಡಿಮೆ / ಹೆಚ್ಚು |
|---|---|---|---|
| 1 | ಶ್ರೀ ರಾಜು ಡಿ. ಕಳ್ಳಿ, ಸಾ: ಲಕ್ಷ್ಮೇಶ್ವರ | 26,05,733-93 | 13.10% ಕಡಿಮೆ |
| 2 | ಶ್ರೀ ಎಸ್. ವಾಯ್. ಪಾಪನೂರ ಸಾ: ಶಿರಹಟ್ಟಿ | 26,89,694-97 | 10.30% ಕಡಿಮೆ |
| 3 | ಶ್ರೀ ವ್ಹಿ ಬಿ ಕಳಸಣ್ಣವರ ಸಾ: ಶಿರಹಟ್ಟಿ | 27,79,648-15 | 7.30% ಕಡಿಮೆ |
| 4 | ಶ್ರೀ ರಮೇಶ ಟಿ. ದಿವಟೆ ಸಾ: ಗದಗ | 27,97,386-41 | 6.70% ಕಡಿಮೆ |
| 5 | ಶ್ರೀ ಎಫ್. ಟಿ. ಕವಲೂರ ಸಾ: ಬಾಲೆಹೊಸುರು | 29,98,545-03 | 0.00% ಕಡಿಮೆ |

05 ಜನ ಗುತ್ತಿಗೆದಾರರಲ್ಲಿ ಶ್ರೀ ರಾಜು ಡಿ. ಕಳ್ಳಿ ಸಾ: ಲಕ್ಷ್ಮೇಶ್ವರ ಇವರು ಟೆಂಡರ್‌ಗಿಟ್ಟ ಮೊತ್ತದ ಮೇಲೆ ಪ್ರತಿಶತ 13.10% ಕಡಿಮೆ ದರ ಸೂಚಿಸಿದ್ದು, ಟೆಂಡರ್ ದರಗಳಂತೆ ಕಾಮಗಾರಿಯ ಮೊತ್ತವು ರೂ.26,05,733-93 ಗಳಾಗಿರುತ್ತವೆ. ಅತೀ ಕಡಿಮೆ ದರ ಸೂಚಿಸಿ ಮೊದಲ (ಎಲ್-1) ಸ್ಥಾನದಲ್ಲಿರುವ ಶ್ರೀ ರಾಜು ಡಿ. ಕಳ್ಳಿ ಸಾ: ಲಕ್ಷ್ಮೇಶ್ವರ ಇವರು ಸೂಚಿಸಿದ ದರವನ್ನು ಒಪ್ಪಬಹುದೆಂದು ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಮಾ,ಅ,ಯೋ, ಗದಗ ಇವರು ತಿಳಿಸಿರುತ್ತಾರೆ. ಆದ್ದರಿಂದ ಸಮಿತಿಯು ನಿಯಮಾನುಸಾರ ಶ್ರೀ ರಾಜು ಡಿ. ಕಳ್ಳಿ ಸಾ: ಲಕ್ಷ್ಮೇಶ್ವರ ಇವರು ನಮೂದಿಸಿದ ದರಗಳಿಗೆ ಒಪ್ಪಬೇಕೆಂದು ವಿಷಯವನ್ನು ಕಾರ್ಯದರ್ಶಿಯವರು ಸಮಿತಿಯ ಗಮನಕ್ಕೆ ತಂದರು.

ಈ ಬಗ್ಗೆ ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿ, ಶ್ರೀ ರಾಜು ಡಿ. ಕಳ್ಳಿ ಸಾ: ಲಕ್ಷ್ಮೇಶ್ವರ ಇವರು ಸೂಚಿಸಿದ ದರವು ಕಡಿಮೆ ಇರುವುದರಿಂದ ಈ ಮೊತ್ತದಲ್ಲಿ ಗುಣಮಟ್ಟದ ಕಾಮಗಾರಿ ನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂದು ಸಮಿತಿಯು ಅಭಿಪ್ರಾಯಪಟ್ಟು, 05 ನೇ ಸ್ಥಾನದಲ್ಲಿರುವ (ಎಲ್-5) ಶ್ರೀ ಎಫ್.ಟಿ.ಕವಲೂರ ಸಾ: ಬಾಲೆಹೊಸುರು ಇವರು ಸೂಚಿಸಿದ ದರ ರೂ.29,98,545-03 (0.00% ಕಡಿಮೆ) ಗಳಿಗೆ ಸಕ್ಷಮ ಪ್ರಾಧಿಕಾರಿಗಳ ಅನುಮೋದನೆ ಪಡೆದು ಕಾಮಗಾರಿ ವಹಿಸಿಕೊಡಲು ಸಮಿತಿಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ
ಅನುಮೋದಕರು: ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ

**ವಿಷಯ ನಂ-4**

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ ವ್ಯಾಪ್ತಿಯಲ್ಲಿ ಬರುವ ಶಿರಹಟ್ಟೆ ಉಪ ಮಾರುಕಟ್ಟೆಯ 06 ದಿನಸಿ ಮಳಿಗೆ ಹಾಗೂ ಕ್ಯಾಂಟೀನ್ ಕಟ್ಟಡವನ್ನು ಸುಧಾರಣೆ ಮಾಡುವುದು ಹಾಗೂ ಸುಣ್ಣ-ಬಣ್ಣ ಹಚ್ಚುವ ಕಾಮಗಾರಿಗೆ ಬಂದ ಟೆಂಡರ್‌ಗಳನ್ನು ಪರಿಶೀಲಿಸಿ ಒಪ್ಪುವ ಕುರಿತು.

**ಠರಾವ ನಂ-4**

ಸಮಿತಿಯ 2017-18 ನೇ ಸಾಲಿನ ವಾರ್ಷಿಕ ಕ್ರೀಯಾ ಯೋಜನೆಯಡಿಯಲ್ಲಿ ಮಂಜೂರಾದ ಲಕ್ಷ್ಮೇಶ್ವರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ, ಶಿರಹಟ್ಟಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 06 ದಿನಸಿ ಮಳಿಗೆ ಹಾಗೂ ಕ್ಯಾಂಟೀನ ಕಟ್ಟಡವನ್ನು ಸುಧಾರಣೆ ಮಾಡುವದು ಮತ್ತು ಸುಣ್ಣ ಬಣ್ಣ ಹಚ್ಚುವದು. ಕಾಮಗಾರಿಯನ್ನು ನಿರ್ವಹಿಸಲು ಸಮಿತಿಯ ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ ಸಂಖ್ಯೆ/ಕೃಉಮಾಸ (ಲ)/ಅಭಿಕೆ/1064/2019-20, ದಿನಾಂಕ:30-01-2020 ರಂದು ಇ-ಪ್ರೊಕ್ಯೂರ್-ಮೆಂಟ್ ಮೂಲಕ ಟೆಂಡರ್‌ನ್ನು ಅಹ್ವಾನಿಸಲಾಗಿತ್ತು. ಟೆಂಡರ್ ಸ್ವೀಕರಿಸುವ ಕೊನೆಯ ದಿ:12-03-2020 ರಂದು ನಿಗಧಿಪಡಿಸಲಾಗಿತ್ತು. ದಿನಾಂಕ: 17-03-2020 ರಂದು ಬಿಡ್ ಟೆಂಡರ್‌ಗಳನ್ನು ತೆರೆದು ಟೆಂಡರ್‌ನಲ್ಲಿ ಭಾಗವಹಿಸಿದ 05 ಜನ ಗುತ್ತಿಗೆದಾರರು ಸಲ್ಲಿಸಿದ ದಾಖಲೆಗಳನ್ನು ತಾಂತ್ರಿಕ ಹಾಗೂ ಆರ್ಥಿಕ ಪರಿಶೀಲನೆಗಾಗಿ ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು. ಮಾ.ಅ.ಯೋ., ಗದಗ, ಇವರಿಗೆ ಸಲ್ಲಿಸಿ ತುಲನಾತ್ಮಕ ತಃಖ್ತೆ ತಯಾರಿಸಿಕೊಡಲು ಕೋರಲಾಗಿತ್ತು.

ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾ.ಅ,ಯೋ, ಗದಗ, ಇವರು ತುಲನಾತ್ಮಕ ಪಟ್ಟಿ ತಯಾರಿಸಿ ಕೊಟ್ಟಿದ್ದು, ಸದರಿಯವರ ತಾಂತ್ರಿಕ ವರದಿಯಲ್ಲಿ ಒಬ್ಬ ಗುತ್ತಿಗೆದಾರರಾದ ಶ್ರೀ ವಸಂತ ಎಲ್.ದೊಂಗಡಿ ಇವರು ಕಾಮಗಾರಿ ನಿರ್ವಹಿಸಿದ ಪ್ರಮಾಣ ಪತ್ರ ಸಲ್ಲಿಸಿಲ್ಲವೆಂದು ಸೂಚಿಸುತ್ತಾ ಈ ಕೆಳಗಿನಂತೆ ತುಲನಾತ್ಮಕ ಪಟ್ಟಿ ತಯಾರಿಸಿ ಸಲ್ಲಿಸಿರುತ್ತಾರೆ.

| ಕ್ರ ಸಂ | ಗುತ್ತಿಗೆದಾರರ ಹೆಸರು | ಸೂಚಿಸಿದ ದರ | ಕಡಿಮೆ / ಹೆಚ್ಚು |
|---|---|---|---|
| 1 | ಶ್ರೀ ಸರ್ಜಾಪುರ ಪಿ.ಬಿ. | 3,10,586–88 | 22.99% ಕಡಿಮೆ |
| 2 | ಶ್ರೀ ಅಲ್ತಾಫ್ ಹುಸೇನ್ ಹವಾಲ್ದಾರ | 3,38,422–19 | 16.09 % ಕಡಿಮೆ |
| 3 | ಶ್ರೀ ವಸಂತ ಎಲ್ ಧೋಂಗಡಿ | 3,63,679–50 | 9.83 % ಕಡಿಮೆ |
| 4 | ಶ್ರೀ ಮಂಜುನಾಥಸ್ವಾಮಿ ಹಿರೇಮಠ | 3,69,276–53 | 8.44 % ಕಡಿಮೆ |
| 5 | ಶ್ರೀ ಎಫ್. ಟಿ. ಕವಲೂರ ಸಾ: ಬಾಲೆಹೊಸುರು | 4,03,358–92 | 0.00 % ಕಡಿಮೆ |

05 ಜನ ಗುತ್ತಿಗೆದಾರರಲ್ಲಿ ಶ್ರೀ ಸರ್ಜಾಪುರ ಪಿ.ಬಿ. ಸಾ: ಶಿರಹಟ್ಟಿ ಇವರು ಟೆಂಡರ್‌ಗಿಟ್ಟ ಮೊತ್ತದ ಮೇಲೆ ಪ್ರತಿಶತ 22.99 % ಕಡಿಮೆ ದರ ಸೂಚಿಸಿದ್ದು, ಟೆಂಡರ್ ದರಗಳಂತೆ ಕಾಮಗಾರಿಯ ಮೊತ್ತವು ರೂ.3,10,586–88 ಗಳಾಗಿರುತ್ತವೆ. ಅತೀ ಕಡಿಮೆ ದರ ಸೂಚಿಸಿ ಮೊದಲ (ಎಲ್–1) ಸ್ಥಾನದಲ್ಲಿರುವ ಶ್ರೀ ಸರ್ಜಾಪುರ ಪಿ.ಬಿ. ಸಾ: ಶಿರಹಟ್ಟಿ ಇವರು ಸೂಚಿಸಿದ ದರವನ್ನು ಒಪ್ಪಬಹುದೆಂದು ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಮಾ.ಅ,ಯೋ, ಗದಗ ಇವರು ತಿಳಿಸಿರುತ್ತಾರೆ. ಆದ್ದರಿಂದ ಸಮಿತಿಯು ನಿಯಮಾನುಸಾರ ಶ್ರೀ ಸರ್ಜಾಪುರ ಪಿ.ಬಿ. ಸಾ: ಶಿರಹಟ್ಟಿ ಇವರು ನಮೂದಿಸಿದ ದರಗಳಿಗೆ ಒಪ್ಪಬೇಕೆಂದು ವಿಷಯವನ್ನು ಕಾರ್ಯದರ್ಶಿಯವರು ಸಮಿತಿಯ ಗಮನಕ್ಕೆ ತಂದರು.

ಈ ಬಗ್ಗೆ ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿ, ಶ್ರೀ ಪಿ. ಬಿ. ಸರ್ಜಾಪುರ, ಸಾ: ಶಿರಹಟ್ಟಿ, ಗುತ್ತಿಗೆದಾರರು ಎಲ್–1 ರವರು ಸೂಚಿಸಿದ ದರವು ಅತೀ ಕಡಿಮೆ (22.99% ಕಡಿಮೆ) ಇರುವುದರಿಂದ, ಸದರಿಯವರು ಸಲ್ಲಿಸಿರುವ ಟೆಂಡರ್‌ನ್ನು ಒಪ್ಪಿ, ಸದರಿಯವರಿಗೆ ಕಾಮಗಾರಿ ನಿರ್ವಹಿಸಲು ನಿಯಮಾನುಸಾರ ಕ್ರಮವಹಿಸಿ ಕೆಲಸದ ಕಾರ್ಯಾದೇಶ ನೀಡಬೇಕೆಂದು ಕಾರ್ಯದರ್ಶಿಯವರಿಗೆ ಸೂಚಿಸಿ ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ
ಅನುಮೋದಕರು: ಶ್ರೀ ರಾಜಶೇಖರಪ್ಪ ಮಹಾಲಿಂಗಪ್ಪ ಕರೆಣ್ಣವರ

**ವಿಷಯ ನಂ–5**

ಮುಖ್ಯ ಮಾರುಕಟ್ಟೆ ಪ್ರಾಂಗಣಕ್ಕೆ ಹೊಂದಿಕೊಂಡಿರುವ ಹಮಾಲರ ಕಾಲೊನಿಯಲ್ಲಿಯ ಹಮಾಲರ ಮನೆಗಳ ಮೇಲೆ ಇರುವ ಸಮಿತಿಯ ಆಶ್ರಯ ಸಾಲದ ಬೋಜಾ ದಾಖಲ ಮಾಡಿದ್ದನ್ನು ಕಡಿಮೆ ಮಾಡುವ ಬಗ್ಗೆ.

**ಠರಾವ ನಂ–5**

ಮುಖ್ಯ ಮಾರುಕಟ್ಟೆ ಪ್ರಾಂಗಣಕ್ಕೆ ಹೊಂದಿಕೊಂಡಿರುವ ಹಮಾಲರ ಕಾಲೊನಿಯಲ್ಲಿ ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ನಿರ್ಮಿಸಿರುವ ಹಮಾಲರ ಮನೆಗಳ ಮಂಜೂರಾಗಿರುವ ಸಾಲದ ಮೇಲೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಲಕ್ಷ್ಮೇಶ್ವರ ಇವರ ಭೋಜಾ ದಾಖಲ ಮಾಡಲಾಗಿದ್ದು ಅದನ್ನು ಸರ್ಕಾರವು ಆಶ್ರಯ ಯೋಜನೆ ಸೇರಿದಂತೆ ವಿವಿಧ ವಸತಿ ಯೋಜನೆಗಳಡಿ ಫಲಾನುಭವಿಗಳಿಗೆ ಸರ್ಕಾರದಿಂದ ನೀಡಲಾದ ಸಾಲ ಮತ್ತು ಅದರ ಮೇಲಿನ ಬಡ್ಡಿ ಮನ್ನಾ ಮಾಡಲಾಗಿದ್ದು ಕಾರಣ ಹಮಾಲರ ಮನೆಗಳ ಮೇಲಿರುವ ಸಮಿತಿಯ ಭೋಜಾವನ್ನು ಕಡಿಮೆ ಮಾಡಬೇಕೆಂದು ಲಕ್ಷ್ಮೇಶ್ವರ ಹಮಾಲರ ಸಂಘ ಇವರು ವಿನಂತಿಸಿಕೊಂಡಿರುವ ಪತ್ರವನ್ನು ಕಾರ್ಯದರ್ಶಿಯವರು ಸಭೆಯಲ್ಲಿ ವಿವರಿಸಿ ಹೇಳಿದರು.

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, ಸರ್ಕಾರದ ಆದೇಶವನ್ನು ಪರಿಶೀಲಿಸಿ ಸದರಿ ಆದೇಶದಲ್ಲಿ ಸಮಿತಿಯಿಂದ ಲೈಸನ್ಸ ಪಡೆದ ಹಮಾಲರಿಗೆ ಮಂಜೂರಾಗಿರುವ ಸಾಲವು ಮನ್ನಾ ಆಗಿದ್ದರೆ ಅದರನ್ವಯ ಪರಿಶೀಲಿಸಿ ಸಮಿತಿಯ ಆಶ್ರಯ ಸಾಲದ ಭೋಜಾವನ್ನು ಧಾಖಲು ಮಾಡಿದ್ದನ್ನು ಕಡಿಮೆ ಮಾಡಲು ಕಾರ್ಯದರ್ಶಿಯವರಿಗೆ ಅಧಿಕಾರ ಕೊಟ್ಟು, ಒಪ್ಪಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಸುರೇಶ ವೀರಭದ್ರಪ್ಪ ಬಳ್ಳಾರಿ
ಅನುಮೋದಕರು: ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ

| | |
|---|---|
| ವಿಷಯ ನಂ–6 | 2020–21 ನೇ ಸಾಲಿನಿಂದ ಮುಂದಿನ ಅವಧಿಗೆ ಲೈಸನ್ಸ ಕೋರಿ ಬಂದ ಅರ್ಜಿಗಳನ್ನು ಪರಿಶೀಲಿಸಿ ನವೀಕರಣ / ಮಂಜೂರಾತಿ ಮಾಡುವ ಕುರಿತು. |
| ಠರಾವ ನಂ–6 | ಈ ಕೆಳಕಾಣಿಸಿದ ಅರ್ಜಿದಾರರು ಸಮಿತಿಯಿಂದ ಲೈಸನ್ಸ ಕೋರಿ ಅವಶ್ಯಕ ದಾಖಲಾತಿಗಳೊಂದಿಗೆ ನಿಗಧಿತ ನಮೂನೆಯಲ್ಲಿ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಿದ್ದು ಅವರುಗಳ ವಿವರವನ್ನು ಸಭೆಗೆ ಓದಿ ಹೇಳಲಾಯಿತು. |

| ಕ್ರ. ಸಂ | ದಲ್ಲಾಲರ ವಿವರ ಮತ್ತು ವಿಳಾಸ | ಕೋರಿದ ಲೈಸನ್ಸ ವಿವರಗಳು |
|---|---|---|
| 1 | ಅಬ್ದುಲ್‌ಖಾದರ ಎಸ್. ಕಣಕೆ, | ದಲ್ಲಾಲಿ, |
| 2 | ಸುಲೆಮಾನ ಎ. ಕಣಕೆ, | ದಲ್ಲಾಲಿ, |

| ಕ್ರ. ಸಂ | ವರ್ತಕರ ಹೆಸರು ಮತ್ತು ವಿವರ | ರಫ್ತುದಾರರು | ಆಮದುದಾರರು | ಸಂಗ್ರಣಗಾರರು | ಸಂಸ್ಕರಣಕಾರರು | ಕ್ರಷರ್ | ಜಿನ್ನರ್ | ಪ್ರೆಷರ್ |
|---|---|---|---|---|---|---|---|---|
| 1 | ಶ್ರೀ ಬಸವ ಟ್ರೇಡಸ್, ಸಾ: ಲಕ್ಷ್ಮೇಶ್ವರ | 01 | 01 | 01 | – | – | – | – |
| 2 | ಶ್ರೀ ಎಸ್. ಬಿ. ಲಕ್ಕುಂಡಿ, ಸಾ: ಲಕ್ಷ್ಮೇಶ್ವರ | 01 | 01 | 01 | – | – | – | – |
| 3 | ಶ್ರೀ ಉಮಾ ಪಾರ್ವತಿ, ಇಂಡಸ್ಟ್ರೀಜ್, ಸಾ: ಲಕ್ಷ್ಮೇಶ್ವರ | 01 | – | 01 | 01 | – | – | – |
| 4 | ಶ್ರೀ ವೀರಭದ್ರೇಶ್ವರ ಟ್ರೇಡಿಂಗ್ ಫರ್ಮ್, ಸಾ: ಲಕ್ಷ್ಮೇಶ್ವರ | 01 | 01 | 01 | – | – | – | – |
| 5 | ಶ್ರೀ ರಾಜೇಂದ್ರ ಕಾಟನ್ ಕಾರ್ಪೋರೇಶನ್, ಸಾ: ಲಕ್ಷ್ಮೇಶ್ವರ | 01 | 01 | 01 | – | – | 01 | – |
| 6 | ಶ್ರೀ ಎ.ಎಂ. ಚಕ್ರಸಾಲಿ, ಸಾ: ಲಕ್ಷ್ಮೇಶ್ವರ | 01 | 01 | 01 | – | – | – | – |
| 7 | ದೂದನಾನಾ ಟ್ರೇಡರ್ಸ್ ಸಾ: ಲಕ್ಷ್ಮೇಶ್ವರ | 01 | 01 | 01 | – | – | – | – |
| 8 | ಶ್ರೀ ವಿಜಯಲಕ್ಷ್ಮೀ ಟ್ರೇಡರ್ಸ್, ಸಾ: ಲಕ್ಷ್ಮೇಶ್ವರ | 01 | 01 | 01 | – | – | – | – |
| 9 | ಮೆ: ರೇಣುಕಾ ಅಗ್ರೋ ಇಂಡಸ್ಟ್ರೀಜ್ ಸಾ: ಲಕ್ಷ್ಮೇಶ್ವರ | 01 | 01 | – | – | – | 01 | – |
| 10 | ಶ್ರೀ ಮೇಟಿ ಬ್ರದರ್ಸ್, ಸಾ: ಲಕ್ಷ್ಮೇಶ್ವರ | 01 | 01 | 01 | – | – | – | – |
| 11 | ಸೂರಣಗಿ ಟ್ರೇಡಿಂಗ್ ಫರ್ಮ್, ಸಾ: ಲಕ್ಷ್ಮೇಶ್ವರ | 01 | 01 | 01 | – | – | – | – |
| 12 | ಶ್ರೀ ಸಂಜೀವಕುಮಾರ ಜಿ. ಬರಿಗಾಲಿ,ಸಾ: ಲಕ್ಷ್ಮೇಶ್ವರ | 01 | 01 | 01 | – | – | – | – |
| 13 | ಹಿಮ್ಮತ್‌ಮಲ್ಲ ಪನ್ನಾಲಾಲ ಜೈನ್, ಸಾ: ಲಕ್ಷ್ಮೇಶ್ವರ | 01 | 01 | 01 | – | – | – | – |
| | **ಒಟ್ಟು** | **13** | **12** | **12** | **01** | **–** | **02** | **–** |

**ಸನ್ 2020–21 ನೇ ಸಾಲಿನ ಅವಧಿಗೆ ಮಂಜೂರಾದ ಲೈಸನ್ಸಗಳು**

| ಕ್ರ.ಸಂ | ಲೈಸನ್ಸ್‌ದಾರರ ವಿವರ | ನವೀಕರಣ | ಹೊಸ | ಒಟ್ಟು |
|---|---|---|---|---|
| 1 | ಹಮಾಲರು | 147 | 35 | 182 |
| 2 | ಚಕ್ಕಡಿಯವರು | 31 | 02 | 33 |
| 3 | ತೂಕದವರು | 07 | – | 07 |

ಸಭೆಯಲ್ಲಿ ಈ ಕುರಿತು ಕೂಲಂಕುಷವಾಗಿ ಪರಿಶೀಲಿಸಿ ಮೇಲ್ಕಾಣಿಸಿದ ದಲ್ಲಾಲರು ಮತ್ತು ವರ್ತಕರು ಲೈಸನ್ಸಗಳನ್ನು 10 ವರ್ಷದ ಅವಧಿಗೆ ಲೈಸನ್ಸ ಮಂಜೂರು ಮಾಡಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸೂಚಕರು: ಶ್ರೀಮತಿ ಪಕ್ಕವ್ವ ಯಲ್ಲಪ್ಪ ಜೋಗಿ
ಅನುಮೋದಕರು: ಶ್ರೀ ಪುಲಕೇಶ ಗೂಳಪ್ಪ ಉಪನಾಳ

**ವಿಷಯ ನಂ–7** ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು.

**ವಿಷಯ ನಂ–7(1)** ನಿಯಮ–71 ರಡಿ ಸಭಾ ಭವನ/ ಟೆಂಡರ್ ಹಾಲ್ ಕಟ್ಟಡದ ಮುಂದುಗಡೆ ನೆಲಹಾಸು (ಫೆವರ್ಸ್) ಕಲ್ಲು ಜೋಡಿಸುವ ಕಾಮಗಾರಿಗೆ ಬಂದ ಟೆಂಡರ್‌ನ್ನು ಪರಿಶೀಲಿಸಿ ಒಪ್ಪುವ ಬಗ್ಗೆ.

**ಠರಾವ ನಂ–7(1)** ನಿಯಮ–71 ರಡಿ ಸಭಾ ಭವನ/ ಟೆಂಡರ್ ಹಾಲ್ ಕಟ್ಟಡದ ಮುಂದುಗಡೆ ನೆಲಹಾಸು (ಫೆವರ್ಸ್) ಕಲ್ಲು ಜೋಡಿಸುವ ಕಾಮಗಾರಿಯನ್ನು ನಿರ್ವಹಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗದಗ ಇವರು ತಯಾರಿಸಿಕೊಟ್ಟ ಅಂದಾಜು ಪತ್ರಿಕೆಯನ್ವಯ ನಿಯಮ 71 ರಡಿಯಲ್ಲಿ ಈ ಸಮಿತಿಯ ಟೆಂಡರ ಪ್ರಕಟಣೆ ಸಂಖ್ಯೆ/ಕೃಉಮಾಸ(ಲ)/1173/2019–20, ದಿ: 26–02–2020 ರ ಮೂಲಕ ಟೆಂಡರನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ ಪ್ರಕಟಣೆಯನ್ವಯ ಟೆಂಡರನಲ್ಲಿ ಈ ಕೆಳಕಂಡ ಗುತ್ತಿಗೆದಾರರು ಭಾಗವಹಿಸಿದ್ದು, ವಿವರ ಈ ಕೆಳಗಿನಂತಿರುತ್ತದೆ.

**ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ವಿವರ.**

| ಕ್ರ. ಸಂ | ಕಾಮಗಾರಿಯ ವಿವರ | ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ಹೆಸರು | ಇಎಂಡಿ ರೂ. | ಗುತ್ತಿಗೆದಾರರು ನಮೂದಿಸಿದ ದರ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| 1 | ನಿಯಮ–71 ರಡಿ ಸಭಾ ಭವನ/ ಟೆಂಡರ್ ಹಾಲ್ ಕಟ್ಟಡದ ಮುಂದುಗಡೆ ನೆಲಹಾಸು (ಫೆವರ್ಸ್) ಕಲ್ಲು ಜೋಡಿಸುವ ಕಾಮಗಾರಿಯನ್ನು ಕೈಕೊಳ್ಳುವುದು. | ಶ್ರೀ ಫಕ್ಕೀರೇಶ ತಿರಕಪ್ಪ ಕವಲೂರ, ಸಾ: ಬಾಲೆಹೊಸುರು | 2500 | 89172–93 | 1 ನೇ ಕಡಿಮೆ ದರ |
| | | ಶ್ರೀ ಎಂ. ಎಂ. ಜಾಲಿಮರದ ಸಾ: ಲಕ್ಮೇಶ್ವರ | 2500 | 89840–00 | 2 ನೇ ಕಡಿಮೆ ದರ |

ಸಭೆಯಲ್ಲಿ ಈ ಕುರಿತು ಕೂಲಂಕುಷವಾಗಿ ಪರಿಶೀಲಿಸಲಾಯಿತು, ಮೇಲೆ ಹೇಳಿದ ಗುತ್ತಿಗೆದಾರರಲ್ಲಿ ಶ್ರೀ ಫಕ್ಕೀರೇಶ ತಿರಕಪ್ಪ ಕವಲೂರ ಗುತ್ತಿಗೆದಾರರು, ಸಾ: ಬಾಲೆಹೊಸುರ, ಇವರು 1 ನೇ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರಾಗಿದ್ದು, ಸದರಿಯವರ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ನಿಯಮ–71 ರಡಿಯಲ್ಲಿ ಸದರಿ ಕಾಮಗಾರಿಯನ್ನು ನಿರ್ವಹಿಸಲು ಕಡಿಮೆ ದರ ನಮೂದಿಸಿದ ಶ್ರೀ ಫಕ್ಕೀರೇಶ ತಿರಕಪ್ಪ ಕವಲೂರ ಗುತ್ತಿಗೆದಾರರು, ಸಾ: ಬಾಲೆಹೊಸುರ, ಇವರು ಸೂಚಿಸಿದ ಮೊತ್ತ ರೂ. 89172–93 ಗಳಿಗೆ ಒಪ್ಪಿ, ನಿರ್ಣಯಿಸಲಾಯಿತು. ಸದರಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ
ಅನುಮೋದಕರು: ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ

| | |
|---|---|
| ವಿಷಯ ನಂ–7(2) | ಕೋವಿಡ್–19 ಕೊರೊನಾ ಸೋಂಕು ತಡೆಗಟ್ಟುವ ಸಂಬಂಧ ರಾಜ್ಯ ಸರ್ಕಾರಕ್ಕೆ ಆರ್ಥಿಕ ಸಂಪನ್ಮೂಲ ಕ್ರೂಢೀಕರಣಗೊಳಿಸುವ ಸಂಬಂಧ ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ 5–00 ಲಕ್ಷ ದೇಣಿಗೆ ನೀಡಿದ್ದು ಘಟನೋತ್ತರ ಬಜೆಟ್ ಮಂಜೂರಾತಿ ಪಡೆಯುವ ಕುರಿತು |
| ಠರಾವ ನಂ–7(2) | ರಾಜ್ಯ ಸರ್ಕಾರವು ಕೋವಿಡ್–19 ಕೊರೊನಾ ಸೋಂಕು ತಡೆಗಟ್ಟುವ ಸಂಬಂಧ ಹಾಗೂ ಸಮಗ್ರವಾಗಿ ರಾಜ್ಯದ ಜನತೆಯ ಹಿತಾಸಕ್ತಿ ಕಾಪಾಡುವ ಸಂಬಂಧ ರಾಜ್ಯ ಸರ್ಕಾರವು ಆರ್ಥಿಕ ಸಂಪನ್ಮೂಲ ಕ್ರೂಢೀಕರಣಗೊಳಿಸುತ್ತಿದ್ದು, ರಾಜ್ಯದ ಎಲ್ಲ ಮಾರುಕಟ್ಟೆ ಸಮಿತಿಗಳು ತಮ್ಮ ಜವಾಬ್ದಾರಿಯನ್ನು ಗಮನದಲ್ಲಿಟ್ಟುಕೊಂಡು ಮುಖ್ಯ ಮಂತ್ರಿಯವರ ಪರಿಹಾರ ನಿಧಿಗೆ ದೇಣಿಗೆ ನೀಡಲು ಅಗತ್ಯ ಕ್ರಮ ಕೈಕೊಳ್ಳಲು ಮಾನ್ಯ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರ ಇವರು ಪತ್ರ ಸಂಖ್ಯೆ/ಕೃಮಾಇ/ಮುಂಪ/01/ಇತರೆ/2019–20 ದಿನಾಂಕ: 23–03–2020 ರಲ್ಲಿ ನಿರ್ದೇಶಿಸಿರುವುದನ್ನು ಸಭೆಯಲ್ಲಿ ಅವಲೋಕಿಸಲಾಯಿತು. ಈ ಪ್ರಯುಕ್ತ ಸಮಿತಿಯಿಂದ 5–00 ಲಕ್ಷಗಳನ್ನು ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆಯಾಗಿ ನೀಡಿರುವುದನ್ನು ಒಪ್ಪಿ ದೃಢೀಕರಿಸಲಾಯಿತು. ಮುಂದುವರೆದು ಸಭೆಯಲ್ಲಿ ಈ ಕುರಿತು ರೂ. 5–00 ಲಕ್ಷಗಳಿಗೆ ಮಾನ್ಯ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರ ಇವರಿಂದ ಘಟನ್ನೋತ್ತರ ಬಜೆಟ್ ಮಂಜೂರಾತಿಯನ್ನು ಪಡೆಯಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.<br><br>ಸೂಚಕರು: ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ<br>ಅನುಮೋದಕರು: ಶ್ರೀ ನೀಲಪ್ಪ ಈರಪ್ಪ ಹತ್ತಿ |
| | ಈ ರೀತಿ ಕಾರ್ಯಕಲಾಪಗಳು ಜರುಗಿ ಸಭೆಯು ಮುಕ್ತಾಯವಾಯಿತು |

| ಸಹಿ/– | ಸಹಿ/– |
|---|---|
| ಕಾರ್ಯದರ್ಶಿ<br>ಕೃ.ಉ.ಮಾ.ಸ.,ಲಕ್ಷ್ಮೇಶ್ವರ | ಅಧ್ಯಕ್ಷರು<br>ಕೃ.ಉ.ಮಾ.ಸ.,ಲಕ್ಷ್ಮೇಶ್ವರ |

'ನಕಲು ಪ್ರತಿ'



ಕಾರ್ಯದರ್ಶಿ
ಕೃ.ಉ.ಮಾ.ಸ ಲಕ್ಷ್ಮೇಶ್ವರ